ವಸುಧೇಂದ್ರ

ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ



# ಇಟಾಲಿಯನ್ನನ 'ಅಮೆರಿಕ ಸಿನಿಮಾ' ಪವಾಡ!

**1966**ರಲ್ಲಿ ತೆರೆಕಂಡ, ಬರೋಬ್ಬರಿ ಮೂರೂವರೆ ತಾಸಿನ ಸಿನಿಮಾವೊಂದು, ಈಗ ನಾಲ್ಕನೆಯ ಬಾರಿ ನೋಡುವಾಗಲೂ ನನ್ನ ಉತ್ಸಾಹವನ್ನು ಕುಗ್ಗಿಸದೆ 'ಸಿನಿಮಾ ಇನ್ನಷ್ಟು ದೊಡ್ಡದಿರಬೇಕಿತ್ತು' ಎಂದು ಅನ್ನಿಸಿದರೆ ಅದು ಪವಾಡವೇ ಸರಿ. **'The Good The Bad and The Ugly'** (**TGTBATU** ಸಂಕ್ಷಿಪ್ತನಾಮ) ಎನ್ನುವ 'ಸ್ಪಾಗ್ಯಾಟಿ ವೆಸ್ಟರ್ನ್' ಸಿನಿಮಾ ಒಂದು ಕ್ಲಾಸಿಕ್ ಎನ್ನುವುದರಲ್ಲಿ ಯಾವ ಅನುಮಾನವೂ ಬೇಡ. ನನ್ನ ಅಭಿಪ್ರಾಯವನ್ನು ನೀವು ನಂಬದಿದ್ದರೆ, ಕೋಟ್ಯಂತರ ವೀಕ್ಷಕರು ಇದೇ ಅಭಿಪ್ರಾಯವನ್ನು ಐಎಂಡಿಬಿಯಲ್ಲಿ (ಸಿನಿಮಾ ಕಣಜ) ನಮೂದಿಸಿರುವುದರಿಂದ ಅದು ಈಗ ವಿಶ್ವದ ಈವರೆಗಿನ ಅತ್ಯುತ್ತಮ ಸಿನಿಮಾಗಳ ಪಟ್ಟಿಯಲ್ಲಿ ಅಗ್ರ ಹತ್ತರಲ್ಲಿ ಒಂದು ಎಂಬುದನ್ನು ಗಮನಿಸಬೇಕು.

ಸುಮಾರು 1860–65ರ ಕಾಲಮಾನದ ಕತೆಯಿದು. ಅಮೆರಿಕದಲ್ಲಿ ಆಂತರಿಕ ಯುದ್ಧ ನಡೆಯುತ್ತಿರುವ ಪ್ರಕ್ಷುಬ್ಧ ಸಮಯ. ಆಗ ಮೂವರು ಅಪರಾಧಿಗಳು ಸೇರಿಕೊಂಡು ಬಚ್ಚಿಟ್ಟ